# ಪುಸ್ತಕಗಳು: ಜಗತ್ತಿನ ಕಿಟಕಿಗಳು

## ಮನೋಜ್ ನಿಗಮ್

ಮಕ್ಕಳು ಸಮಾಜದ ಭವಿಷ್ಯ ಮತ್ತು ಪುಸ್ತಕಗಳು ಅದರ ಕನ್ನಡಿ ಎಂದು ಹೇಳಲಾಗುತ್ತದೆ. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಕೇವಲ ಪಠ್ಯಪುಸ್ತಕಗಳೊಂದಿದ್ದರೆ ಸಾಲದು. ತರಗತಿಕೋಣೆಯ ಹೊರಗೂ ಒಂದು ಜಗತ್ತಿದೆ ಮತ್ತು ಪುಸ್ತಕಗಳು ಆ ಜಗತ್ತಿನ ಒಂದು ಮುಖ್ಯವಾದ ಭಾಗಗಳಾಗಿವೆ. ಆದರೆ ನಮ್ಮ ದೇಶದಲ್ಲಿ ಮಕ್ಕಳಿಗೆ ನೀಡಬಹುದಾದ ಒಳ್ಳೆಯ ಪುಸ್ತಕಗಳ ಸಂಖ್ಯೆ ಕಡಮೆ ಇದೆ. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಇರುವ ಮಕ್ಕಳ ಸಾಹಿತ್ಯವು ಸೀಮಿತವಾಗಿದೆ, ಅಂದರೆ ಇಲ್ಲಿ ಐದು ಮಕ್ಕಳಿಗೆ ಒಂದು ಪುಸ್ತಕ ಲಭ್ಯವಿದ್ದರೆ, ಇಂಗ್ಲೆಂಡಿನಲ್ಲಿ ಪ್ರತೀ ಮಗುವಿಗೆ ಆರು ಪುಸ್ತಕಗಳು ಲಭ್ಯವಿವೆ. ಅಷ್ಟು ದೊಡ್ಡ ವ್ಯತ್ಯಾಸವನ್ನು ನಾವು ಕಾಣಬಹುದು! ಇಲ್ಲಿನ ಸರ್ಕಾರ ಮತ್ತು ಸಮಾಜಗಳಿಗೆ ಅದು ಗೊತ್ತಿಲ್ಲ, ಆದರೂ ವ್ಯಕ್ತಿತ್ವ ವಿಕಸನಕ್ಕೆ ಒಳ್ಳೆಯ ಪುಸ್ತಕಗಳನ್ನು ಓದುವುದು ಬಹಳ ಮುಖ್ಯ ಎಂಬುದನ್ನು ಎಲ್ಲರೂ ಒತ್ತಿ ಹೇಳುತ್ತಾರೆ.

ಶಿಕ್ಷಣ ನೀತಿಗಳನ್ನು ಮಾಡಿದಾಗ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ, ಅಥವಾ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಸುಧಾರಿಸುವ ಚರ್ಚೆ ಏಳುತ್ತದೆ, ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದು ಮತ್ತು ಅವರು ಸ್ವತಂತ್ರರಾಗಿ ಓದಲು ಕಲಿಯುವಂತೆ ವಾಚನಾಲಯಗಳನ್ನು ಸಜ್ಜುಗೊಳಿಸುವುದು ಎಷ್ಟು ಮಹತ್ತ್ವದ ವಿಷಯ ಎಂಬುದನ್ನು ಚರ್ಚೆಗಳಲ್ಲಿ ವ್ಯಕ್ತಪಡಿಸಲಾಗುತ್ತದೆ. ಮುದಲಿಯಾರ್ ಕಮೀಶನ್ ವರದಿ ಹೇಳಿದಂತೆ ಶಾಲೆಗಳಲ್ಲಿ ವಾಚನಾಲಯಗಳು ಅತೀ ಆಕರ್ಷಕ ಜಾಗಗಳಾಗಿರಬೇಕು. ಮೂಲಭೂತ ಸಾಕ್ಷರತೆಯನ್ನು ಬಲಪಡಿಸಲು ಪುಸ್ತಕಗಳು ಮತ್ತು ವಾಚನಾಲಯಗಳಿಗೆ ಬಹಳ ಮಹತ್ತ್ವವನ್ನು ನೀಡಲಾಗಿದೆ. 2019ರ[1] ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಪ್ರತಿಯಲ್ಲಿ ಸಹ ಶಾಲಾ ಮತ್ತು ಸಾರ್ವಜನಿಕ ವಾಚನಾಲಯಗಳನ್ನು ವಿಸ್ತರಿಸುವುದಕ್ಕೆ ಹಾಗೂ ಓದು ಮತ್ತು ಸಂವಹನದ ಸಂಸ್ಕೃತಿಯನ್ನು ಬೆಳೆಸುವುದಕ್ಕೆ ಮಹತ್ತ್ವವನ್ನು ನೀಡಲಾಗಿದೆ.

ಆರಂಭದಿಂದಲೂ ಏಕಲವ್ಯ ಫೌಂಡೇಶನ್ನಿನ ಶೈಕ್ಷಣಿಕ ಉಪಕ್ರಮದ ವಿವಿಧ ಯೋಜನೆಗಳಲ್ಲಿ ಪಠ್ಯಪುಸ್ತಕಗಳ ಜೊತೆಗೆ ಇತರ ಪುಸ್ತಕಗಳನ್ನೂ ಓದಬಹುದಾದ ವಾಚನಾಲಯಗಳು ಅತೀ ಮುಖ್ಯವಾದ ಭಾಗವಾಗಿವೆ. ಓದುವ ಸಂಸ್ಕೃತಿಯೊಂದನ್ನು ಬೆಳೆಸುವ ಮತ್ತು ಪುಸ್ತಕಗಳನ್ನು ಆಧರಿಸಿ ವಿವಿಧ ಚಟುವಟಿಕೆಗಳನ್ನು ಮಾಡುವ ಗುರಿಯನ್ನು ಅದು ಹೊಂದಿದೆ. ನಮ್ಮ ದೇಶದ ಮೂರು ದಶಕಗಳ ಹಿಂದಿನ ಸ್ಥಿತಿಯನ್ನು ಅವಲೋಕಿಸಿದರೆ, ಮುಖ್ಯವಾಗಿ ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಓದುವ ಸಂಸ್ಕೃತಿ ಇರಲಿಲ್ಲ ಮತ್ತು ಪುಸ್ತಕಗಳೂ ಲಭ್ಯವಿರಲಿಲ್ಲ. ಮಕ್ಕಳಿಗೆ ಶಿಕ್ಷಣಕ್ಕೆ ಸಂಬಂಧಿಸಿದ ಉತ್ತಮ ಗುಣಮಟ್ಟದ ಪುಸ್ತಕಗಳು ಇಲ್ಲ ಮತ್ತು ಮಕ್ಕಳ ಸಾಹಿತ್ಯವನ್ನು ಪ್ರಕಟಿಸುವ ಪ್ರಕಾಶಕರೂ

---

[1] *Draft National Education Policy 2019*, https://mhrd.gov.in/sites/upload_files/mhrd/files/Draft_NEP_2019_HI.pdf

ಬಹಳ ಇಲ್ಲ ಎಂಬುದನ್ನು  ನಾವು ಏಕಲವ್ಯದವರು ಮನಗಂಡೆವು. ಅಂತಹ ಪುಸ್ತಕಗಳಿಗೆ ಬೇಡಿಕೆ ಇರದಿದ್ದರೂ ಅದರ ಅಗತ್ಯವಂತೂ ಇತ್ತು. ಶಿಕ್ಷಣ ಕ್ಷೇತ್ರದಲ್ಲಿನ ತನ್ನ ಅನುಭವದ ಮೂಲಕ ಏಕಲವ್ಯ ಸಂಸ್ಥೆಯು ಬಹಳಷ್ಟನ್ನು ಕಲಿತಿದೆ.

**ಮಕ್ಕಳ ಪುಸ್ತಕಗಳ ಅಗತ್ಯ**

ಶೈಕ್ಷಣಿಕ ದೃಷ್ಟಿಯಿಂದ ನೋಡಿದರೆ, ಮಕ್ಕಳ ವಯಸ್ಸು ಮತ್ತು ಆಸಕ್ತಿಗೆ ಅನುಗುಣವಾದ ಪುಸ್ತಕಗಳ ಕೊರತೆ ಇತ್ತು. ಕೆಲವು ಪುಸ್ತಕಗಳು ಲಭ್ಯವಿದ್ದರೂ ಅವುಗಳ ಬೆಲೆ ವಿಪರೀತ ಹೆಚ್ಚಾದ್ದರಿಂದ ಶ್ರೀಸಾಮಾನ್ಯರ ಕೈಗೆ ಎಟುಕುವಂತಿರಲಿಲ್ಲ. ಆರಂಭಿಕ ಓದುಗರು, ಹದಿ ಹರೆಯದವರು ಮತ್ತು ಸೃಜನಾತ್ಮಕ ಚಟುವಟಿಕೆಗಳ ಸಲುವಾಗಿ ಹಿಂದಿಯಲ್ಲಂತೂ ಬಹಳ ಕಡಮೆ ಪುಸ್ತಕಗಳು ಇದ್ದವು, ಅಥವಾ ಇರಲೇ ಇಲ್ಲ ಎಂದರೂ ತಪ್ಪಾಗಲಾರದು. ಶಿಕ್ಷಕರಿಗೂ ಸಹ, ಬೋಧನಾಕ್ರಮವನ್ನು ಕುರಿತ ಪುಸ್ತಕಗಳು ಇರಲಿಲ್ಲ, ಇದ್ದರೂ ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಿತ್ತು. ಪುಸ್ತಕಗಳ ಕೊರತೆಯನ್ನು ಅರ್ಥ ಮಾಡಿಕೊಂಡು ಏಕಲವ್ಯ ಸಂಸ್ಥೆಯು ತನ್ನದೇ ಪ್ರಕಾಶನವನ್ನು ಆರಂಭಿಸಿತು. ***ಚಕ್‌ಮಕ್*, *ಶೈಕ್ಷಿಕ್ ಸಂದರ್ಭ*** ಮತ್ತು ***ಸ್ರೋತ್***ಯಂತಹ ಪುಸ್ತಕಗಳನ್ನು ಪ್ರಕಟಿಸಿದ ಅನುಭವ ಅದಕ್ಕೆ ಆಗಲೇ ಇತ್ತು. ಮೊದಲ ನಾಲ್ಕೈದು ವರ್ಷಗಳಲ್ಲಿ ಏಕಲವ್ಯ ಸಂಸ್ಥೆಯು ಕೆಲಸ ಮಾಡುತ್ತಿದ್ದ ಜಾಗಗಳಲ್ಲಿ ಮಾತ್ರವೇ ಪುಸ್ತಕಗಳನ್ನು ಮಾರಲಾಯಿತು. ಆಗ ಭಾರತೀಯ ಹಿನ್ನೆಲೆಯನ್ನು ಹೊಂದಿದ ಉತ್ತಮ ಗುಣಮಟ್ಟದ ಪುಸ್ತಕಗಳು ಇಂಗ್ಲಿಷಿನಲ್ಲಿ ಲಭ್ಯ ಇವೆ ಮತ್ತು ನಾಶನಲ್ ಬುಕ್ ಟ್ರಸ್ಟ್ ಹಾಗೂ ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಅಂತಹ ಕೆಲವೇ ಪ್ರಕಾಶನ ಸಂಸ್ಥೆಗಳು ಹಿಂದಿ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸುತ್ತಿವೆ ಎಂದು ನಾವು ಅಂದುಕೊಂಡಿದ್ದೆವು. ಪ್ರಕಾಶನ ಉದ್ಯಮದಲ್ಲಿ ಏಕಲವ್ಯ ಸಂಸ್ಥೆಗೆ ಸ್ವಲ್ಪ ಅನುಭವ ಸಿಕ್ಕ ಮೇಲೆ, ಅಂದರೆ 1990 ರ ಸುಮಾರಿಗೆ ಕೇವಲ ಹಿಂದಿ ಮತ್ತು ಇತರ ಭಾಷೆಗಳಲ್ಲಿ ಮಾತ್ರವಲ್ಲ, ಇಂಗ್ಲಿಷಿನಲ್ಲಿ ಕೂಡಾ ಭಾರತೀಯ ಹಿನ್ನೆಲೆಯ ಪುಸ್ತಕಗಳು ಸಿಗುತ್ತಿಲ್ಲ ಎನ್ನುವುದು ಅರ್ಥವಾಯಿತು. ದೊಡ್ಡ ನಗರಗಳಲ್ಲೇನೋ ಲಭ್ಯವಿದ್ದರೂ ಇತರ ಜಾಗಗಳಲ್ಲಿ ಬಹಳ ಕೊರೆತೆ ಇತ್ತು.

2011 ರ ಸುಮಾರಿಗೆ, ದೇಶದ ಅತಿ ದೊಡ್ಡ ವ್ಯಾಪಾರಿ ಸಂಸ್ಥೆಗಳ ಸಂಘಟನೆಯಾದ FICCI[2] (ಭಾರತೀಯ ವಾಣಿಜ್ಯ ಮತ್ತು ಉದ್ದಿಮೆಯ ಫೆಡರೇಶನ್-Federation of Indian Chambers of Commerce and Industry) ಪ್ರತ್ಯೇಕ ಪ್ರಕಾಶನದ ಘಟಕವನ್ನು ಶುರು ಮಾಡಿತು. ಭಾರತೀಯ ಪ್ರಕಾಶನ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಅದು ಒಂದು ಪ್ರಕಾಶನ ವಿಭಾಗವನ್ನು ತೆರೆಯಿತು. ಈ ವಿಭಾಗವು ಪ್ರಕಾಶನಕ್ಕೆ ಸಂಬಂಧಿಸಿದ ಸಮೀಕ್ಷೆಗಳು, ಸೆಮಿನಾರುಗಳು, ಕಾರ್ಯಾಗಾರಗಳು

[2] *http://ficci.in/sector.asp?secid=86*, Publishing Sector Profile

ಮತ್ತು ಅಧ್ಯಯನಗಳನ್ನು ಕೈಗೊಳ್ಳುತ್ತದೆ. FICCI ಪ್ರಕಾರ ಪ್ರಕಾಶನ ಉದ್ಯಮಕ್ಕೆ ಸಂಬಂಧಿಸಿದಂತೆ ಭಾರತವು ಜಗತ್ತಿನಲ್ಲಿಯೇ ಏಳು ಅಗ್ರ ದೇಶಗಳಲ್ಲಿ ಒಂದಾಗಿದೆ.

ಅದೇ ರೀತಿ ಟಾಟಾ ಟ್ರಸ್ಟ್ ನಿಂದ ಆರಂಭಿಸಲ್ಪಟ್ಟ ***ಪರಾಗ್*** ಉಪಕ್ರಮವು (initiative) ಭಾರತೀಯ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಪುಸ್ತಕಗಳ ಅಭಿವೃದ್ಧಿ ಮತ್ತು ಅದು ಎಲ್ಲರಿಗೂ ಸಿಗುವಂತೆ ಮಾಡುವ ಉದ್ದೇಶವನ್ನು ಹೊಂದಿದೆ. ಅದು ಉತ್ತಮವಾದ ಮತ್ತು ಅದೇ ಭಾಷೆಯಲ್ಲಿಯೇ ಮೂಲವಾಗಿ ರಚಿಸಲ್ಪಟ್ಟ ಮಕ್ಕಳ ಸಾಹಿತ್ಯವನ್ನು ಸೃಷ್ಟಿಸಿ ಪ್ರಸರಣ ಮಾಡಲು ಸಹಾಯ ಮಾಡಿದೆ. ಜೊತೆಗೆ, ಮಕ್ಕಳ ಸಾಹಿತ್ಯದ ಸಮಗ್ರ ಪರಿಸರವನ್ನು ಸುಧಾರಿಸಲು ಸತತವಾಗಿ ಪ್ರಯತ್ನಿಸುತ್ತಿದೆ. 'ವ್ಯಾಲ್ಯೂ ನೋಟ್ಸ್' ನಿಂದ ನಡೆಸಲ್ಪಟ್ಟ ಅಧ್ಯಯನವು ಹೊರಹಾಕುವಂತೆ ಕಳೆದ ಎರಡು ದಶಕಗಳಲ್ಲಿ ಪರಾಗ್ ಉಪಕ್ರಮದ ಅಡಿಯಲ್ಲಿ ಸಂಘಟಿತ ಘಟಕಗಳಿಂದ ಸುಮಾರು ನೂರು ಪ್ರಕಾಶಕರು ಪ್ರಕಾಶನವನ್ನು ಆರಂಭಿಸಿದ್ದಾರೆ. ಅವರಲ್ಲಿ ಸುಮಾರು ಇಪ್ಪತ್ತು ಪ್ರಕಾಶಕರು ಉತ್ತಮ ಗುಣಮಟ್ಟದ ಒರಿಜಿನಲ್ ಎನ್ನಬಹುದಾದ ಸಾಹಿತ್ಯವನ್ನು ನೀಡುತ್ತಿದ್ದಾರೆ. ದೇಶದೆಲ್ಲೆಡೆ ಸುಮಾರು 2500 ಪ್ರಕಾಶಕರು ಮಕ್ಕಳ ಸಾಹಿತ್ಯವನ್ನು ಪ್ರಕಟಿಸುತ್ತಿದ್ದಾರೆ, ಆದರೆ ಹೆಚ್ಚಿನವರು ತೀರ ಸಾಧಾರಣ ಎನ್ನಬಹುದಾದ ಪುಸ್ತಕಗಳನ್ನು ಹೊರತರುತ್ತಿದ್ದಾರೆ. 2013-14 ರಲ್ಲಿ ಮಾಡಿದ ಅದೇ ಅಧ್ಯಯನದ[3] ಪ್ರಕಾರ ಇಡೀ ಪ್ರಕಾಶನ ಮಾರುಕಟ್ಟೆಯು ಸುಮಾರು 11,500 ಕೋಟಿಗಳಷ್ಟು ವ್ಯವಹಾರ ಮಾಡಿದರೆ ಅದರಲ್ಲಿ ಮಕ್ಕಳ ಸಾಹಿತ್ಯದ ವ್ಯವಹಾರ ಕೇವಲ 600 ಕೋಟಿಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಅದು ವರ್ಷಕ್ಕೆ 20-25% ರಂತೆ ಬೆಳೆಯುತ್ತಿದೆ. ಇಡೀ ಮಾರುಕಟ್ಟೆಯ ಗಾತ್ರಕ್ಕೆ ಹೋಲಿಸಿದರೆ ಮಕ್ಕಳ ಸಾಹಿತ್ಯವು 5% ನಷ್ಟು ಮಾತ್ರವಿದೆ. ಮಕ್ಕಳ ಸಾಹಿತ್ಯವನ್ನು ಕೊಳ್ಳುವವರಲ್ಲಿ ಸರ್ಕಾರವೇ ದೊಡ್ಡ ಗ್ರಾಹಕನಾಗಿದೆ, ಅದರಲ್ಲಿ 30% ಪುಸ್ತಕಗಳು ನಗರ ಪ್ರದೇಶದಲ್ಲಿ ವಿಕ್ರಯವಾದರೆ 70% ಅನ್ನು ಗ್ರಾಮೀಣ ಭಾಗಕ್ಕೆಂದು ಮೀಸಲಾಗಿಡಲಾಗಿದೆ.

**ಏಕಲವ್ಯದ ಪೋರ್ಟ್‌ಫೋಲಿಯೋ**

ಏಕಲವ್ಯದ ಪುಸ್ತಕಗಳ ರೂಪಣೆ ಮತ್ತು ಪ್ರಸರಣವು ಟಾಟಾ ಟ್ರಸ್ಟ್ ಮತ್ತು ಇತರ ಕೆಲವು ಸಂಸ್ಥೆಗಳ ಸಹಾಯದಿಂದ ಅವ್ಯಾಹತವಾಗಿ ಮುಂದುವರಿದಿದೆ. ಮಕ್ಕಳ ಸಾಹಿತ್ಯವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಎದುರಾಗುವ ಅನೇಕ ಸವಾಲುಗಳನ್ನು ಟಾಟಾ ಟ್ರಸ್ಟ್ ನಿಂದ ನಡೆಸಿದ್ದ ಅಧ್ಯಯನವು ಬಿಚ್ಚಿಟ್ಟಿದೆ. ಮಕ್ಕಳ ಸಾಹಿತ್ಯವನ್ನು ಬರೆಯುವ ಕೌಶಲಗಳ ಕೊರತೆ ಇರುವುದು, ಒರಿಜಿನಲ್ ಮಕ್ಕಳ ಸಾಹಿತ್ಯವನ್ನು ರೂಪಿಸುವುದು ಬಹಳ ದುಬಾರಿ ಎನ್ನುವುದು, ಮತ್ತು ಬರೆಯುವವರಿದ್ದರೂ ಅವರಿಗೆ ನೀಡುವ ಭತ್ಯೆ ಬಹಳ ಕಡಮೆ, ಅಲ್ಲದೇ ಅವರ ಪ್ರತಿಭೆಯನ್ನು ಗುರುತಿಸುವುದೂ ಕಡಮೆ ಎಂಬ ಈ ಎಲ್ಲ ವಿಚಾರಗಳನ್ನು ಅಧ್ಯಯನವು ಮುಂದಿಟ್ಟಿದೆ. ಇವೆಲ್ಲ ಸವಾಲುಗಳ ನಡುವೆಯೂ ಏಕಲವ್ಯವು

---

[3] *Value Notes. 2013. Mapping Study of Children's Literature in India, Mumbai*, Tata Trusts

ಇಂದು 450 ಪುಸ್ತಕಗಳನ್ನು ಪ್ರಕಟಿಸಿದೆ. ಮಕ್ಕಳ ವಿವಿಧ ಆಸಕ್ತಿಗಳಿಗೆ ಅನುಗುಣವಾಗಿ, ಮತ್ತು ಎಳೆಯರು, ಶಿಕ್ಷಕರು ಹಾಗೂ ಶಿಕ್ಷಣ ತಜ್ಞರು -ಹೀಗೆ ವಿವಿಧ ಬಗೆಯ ಓದುಗರನ್ನೂ ಆಕರ್ಷಿಸುವಂತಹ ಪುಸ್ತಕಗಳನ್ನು ತಂದಿದ್ದೇವೆ. ಇಲ್ಲಿ ಚಿತ್ರ ಪುಸ್ತಕಗಳಿವೆ, ಕತೆಪುಸ್ತಕಗಳಿವೆ, ಕವಿತೆಗಳು, ಚಟುವಟಿಕೆಗಳು, ನಾಟಕಗಳು, ಪಝಲ್, ಬೋಧನಾಕ್ರಮ ಮತ್ತು ಹೊಸರೀತಿಯ ಪಠ್ಯಪುಸ್ತಕಗಳು ಹೀಗೆ ಈ ಎಲ್ಲವೂ ಇವೆ. ಪುಸ್ತಕಗಳು ಮತ್ತು ಸಾಹಿತ್ಯವನ್ನು ಅನೇಕ ಬಗೆಯಲ್ಲಿ ರೂಪಿಸಲಾಗಿದೆ. ಸಣ್ಣ ಮತ್ತು ದೊಡ್ಡ ಪುಸ್ತಕಗಳು, ಅಕಾರ್ಡಿಶನ್ ಪುಸ್ತಕಗಳು, ಕಾರ್ಡ್ಸ್ ಮತ್ತು ಪೋಸ್ಟರ್‌ಗಳು -ಹೀಗೆ ಓದುಗರು ತಮ್ಮ ಆವಶ್ಯಕತೆಗಳಿಗೆ ಅನುಗುಣವಾಗಿ ಬಳಸಬಹುದಾಗಿದೆ.

ಶೈಕ್ಷಣಿಕವಾಗಿ ಪೂರಕವಾಗುವ ಗುಣಮಟ್ಟದ ಪುಸ್ತಕಗಳ ಕೊರತೆಯನ್ನು ನೀಗಿಸಲು ಏಕಲವ್ಯವು ಪ್ರಥಮ್, ತುಲಿಕಾ, ತಾರಾ, ಅನ್ವೇಶಿ, ಕಥಾ, ಎ&ಎ ಪ್ರಕಾಶನ, ಜ್ಯೋತ್ಸನಾ, ಸಿಎಲ್‌ಆರ್ (ಸೆಂಟರ್ ಫಾರ್ ಲರ್ನಿಂಗ್ ರಿಸೋರ್ಸಸ್) ಮತ್ತು ಸಹಮತ್ ಹೀಗೆ ಇತರ ಕೆಲವು ಸಂಸ್ಥೆಗಳೊಂದಿಗೆ ಸೇರಿ ಒಳ್ಳೆಯ ಪುಸ್ತಕಗಳನ್ನು ಪ್ರಕಟಿಸಿತು. ನ್ಯಾಶನಲ್ ಬುಕ್ ಟ್ರಸ್ಟ್, ಎನ್‌ಸಿಆರ್‌ಟಿ, ಚಿಲ್ಡ್ರನ್ಸ್ ಬುಕ್ ಟ್ರಸ್ಟ್, ನವನೀತ್ ಪಬ್ಲಿಕೇಶನ್ಸ್ ಮತ್ತು ಸ್ಕೊಲ್ಯಾಸ್ಟಿಕ್ ಇಂಡಿಯಾದಂತಹ ಪ್ರಕಾಶನಗಳು ಈ ಕ್ಷೇತ್ರದಲ್ಲಿ ಮೊದಲಿನಿಂದಲೂ ಕೆಲಸ ಮಾಡುತ್ತಿದ್ದವು.

2000 ದ ಹೊತ್ತಿಗೆ ಏಕಲವ್ಯವು ರೂಪಿಸಿದ ಪುಸ್ತಕಗಳ ಸಂಖ್ಯೆಯು ಅರವತ್ತಕ್ಕೆ ಬಂದಿತ್ತು. ನಾವು ವಿಶ್ವ ಪುಸ್ತಕ ಮೇಳದಂತಹ ಅನೇಕ ಮೇಳಗಳಲ್ಲಿ ಭಾಗವಹಿಸಿದೆವು ಮತ್ತು ನಮ್ಮ ಪುಸ್ತಕಗಳಿಗೆ ಪ್ರೋತ್ಸಾಹಕರ ಪ್ರತಿಕ್ರಿಯೆ ದೊರೆತಿತ್ತು. ಮಕ್ಕಳ ಮತ್ತು ಶೈಕ್ಷಣಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುವವರಲ್ಲಿ ಏಕಲವ್ಯವೊಂದೇ ಇರಲಿಲ್ಲ. ದೇಶದ ಇತರ ಕೆಲವು ಸಂಸ್ಥೆಗಳೂ ಅತ್ಯುತ್ತಮ ಕೆಲಸವನ್ನು ಮಾಡುತ್ತಿದ್ದವು. ಆದರೆ ಎಲ್ಲರಿಗೂ ಇದ್ದ ಸಮಸ್ಯೆ ಒಂದೇ ಆಗಿತ್ತು, ಪುಸ್ತಕಗಳ ಮಾರಾಟ ಮತ್ತು ಪ್ರಚಾರಕ್ಕೆ ಬಹಳ ಸೀಮಿತ ಹಾದಿಗಳಿದ್ದವು.

**_ಪಿಟಾರಾ_ ಇನಿಶಿಯೇಟಿವ್ (ಉಪಕ್ರಮ)**

ಈ ಹಂತದಲ್ಲಿ ನಾವು ನಮ್ಮ ಪುಸ್ತಕಗಳಿಗೊಂದೇ ಅಲ್ಲ, ದೇಶದ ಇತರ ಪ್ರಕಾಶನಗಳು ಮತ್ತು ಸಂಸ್ಥೆಗಳು ಪ್ರಕಟಿಸಿದ ಎಲ್ಲ ಪುಸ್ತಕಗಳು ಮತ್ತು TLM ಗಳನ್ನು (ಬೋಧನಾ-ಕಲಿಕಾ ಸಾಮಗ್ರಿಗಳು) ಸಾರ್ವಜನಿಕರಿಗೆ ಲಭ್ಯವಾಗುವಂತೆ ಒಂದು ಜಾಗವನ್ನು ಕಲ್ಪಿಸಬೇಕೆಂದು ಯೋಚಿಸಿದೆವು. ಅಲ್ಲಿಯವರೆಗೆ ನಾವು ಪುಸ್ತಕಗಳನ್ನು ನಮ್ಮ ಕಛೇರಿಯ ಒಳಗೆ ಸಾಮಾನುಗಳನ್ನು ತುಂಬಿಡುತ್ತಿದ್ದ ಬೆಳಕಿಲ್ಲದ ಒಂದು ಕೋಣೆಯ ಒಳಗೆ ಇಡುತ್ತಿದ್ದೆವು. ನಮ್ಮ ನಿರ್ದೇಶಕರು ತಮಗಾಗಿ ಕಟ್ಟಲಾಗಿದ್ದ ಹೊಸ ಕಛೇರಿಗೆ ಸ್ಥಳಾಂತರಗೊಂಡ ಅನಂತರ, ಅವರು ಅಲ್ಲಿಯವರೆಗೆ ತಮ್ಮ ಕಛೇರಿ ಕೆಲಸಗಳಿಗೆಂದು ಬಳಸುತ್ತಿದ್ದ ಭೋಪಾಲ್ ಆಫೀಸಿನ ಗರಾಜಿನಲ್ಲಿ ಸಾರ್ವಜನಿಕರು, ಶಿಕ್ಷಕರು ಮತ್ತು ಇತರ ಸಂಸ್ಥೆಗಳ ಉದ್ಯೋಗಿಗಳು ಸಹಾ ಬಂದು ಪುಸ್ತಕಗಳನ್ನು ಓದಿ, ಖರೀದಿಸಲೆಂದು ಪುಸ್ತಕಗಳನ್ನು

ಜೋಡಿಸಿಟ್ಟೆವು. ನಾವು ಈ ಪುಸ್ತಕದ ಅಂಗಡಿಗೆ 'ಪಿಟಾರಾ' ಎಂದು ಹೆಸರಿಟ್ಟೆವು. ಅದು ಅನಂತರ 'ಪಿಟಾರಾ-ಶೈಕ್ಷಣಿಕ ಪುಸ್ತಕಗಳ ಒನ್-ಸ್ಟಾಪ್ ಸ್ಟೋರ್' ಎಂದು ಹೆಸರಾಯಿತು. ಭೋಪಾಲ್‌ನಲ್ಲಿ ಆಗಿನ್ನೂ ಓದುವ ಸಂಸ್ಕೃತಿ ಬೆಳೆದಿರಲಿಲ್ಲ, ಆದರೂ ನಮ್ಮ ಅಂಗಡಿಗೆ ಉತ್ತಮ ಪ್ರತಿಕ್ರಿಯೆ ದೊರೆತಿತ್ತು. ಇದರಿಂದ ಉತ್ತೇಜನ ಸಿಕ್ಕು ನಾವು ಇಂದೋರಿನ ನಮ್ಮ ಆಫೀಸಿನಲ್ಲೂ ಪಿಟಾರಾ ಸ್ಟೋರ್ ಅನ್ನು ತೆರೆದೆವು, ಅಲ್ಲಿಯೂ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಅನಂತರ ನಾವು ಎಲ್ಲ ನಗರಗಳಲ್ಲಿಯೂ ಪಿಟಾರಾ ಸ್ಟೋರ್ ಅನ್ನು ತೆರೆಯಲು ಇಚ್ಛಿಸಿದೆವು. ನಮ್ಮ ಬಳಿ ಕಡಮೆ ಸಂಪನ್ಮೂಲಗಳು ಇದ್ದದ್ದರಿಂದ ಆ ಎಲ್ಲ ನಗರಗಳಲ್ಲಿ ಇದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಇತರ ಸಂಸ್ಥೆಗಳೊಂದಿಗೆ ಕೈಜೋಡಿಸಲು ನಾವು ಯೋಚಿಸಿದೆವು. ಕೆಲವು ಸಂಸ್ಥೆಗಳಿಗೆ ನಮ್ಮ ಯೋಚನೆ ಒಪ್ಪಿಗೆಯಾಯಿತು ಮತ್ತು ದುರ್ಗ್, ಫೈಜಾಬಾದ್, ಮುಂಬೈ, ಉದಯಪುರ, ಕಾನ್ಪುರ್, ಕಲ್ಕತ್ತಾ, ದಿಲ್ಲಿ, ಗುರ್‌ಗಾಂವ್, ಜಮ್ಮು, ಸೂರತ್, ವಲ್ಸದ್, ಪಾಟ್ನಾ, ರಾಯ್‌ಪುರ್ ಮತ್ತು ಪುಣೆ ಶಹರಗಳಲ್ಲಿ ನಮ್ಮ ಪಿಟಾರಾ ಆರಂಭವಾಯಿತು.

ಸುಮಾರು 50 ಸಂಸ್ಥೆಗಳಿಗೆ ಸೇರಿದ 2,500 ಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಈ ಪಿಟಾರಾ ಸ್ಟೋರ್‌ಗಳಲ್ಲಿ ಇಟ್ಟೆವು. ನ್ಯಾಶನಲ್ ಬುಕ್ ಟ್ರಸ್ಟ್, ಎನ್‌ಸಿಆರ್‌ಟಿ, ಚಿಲ್ಡ್ರನ್ಸ್ ಬುಕ್ ಟ್ರಸ್ಟ್, ನವನೀತ್ ಪಬ್ಲಿಕೇಶನ್ಸ್, ಪ್ರಥಮ್, ತುಲಿಕಾ, ಕಥಾ, ಸಹಮತ್, ಎನ್‌ಸಿಆರ್‌ಟಿ, ವಿಗ್ಯಾನ್ ಪ್ರಸಾರ್, ಪರ್ಯಾವರಣ್ ಎಜುಟೆಕ್, ಹೋಮಿ ಭಾಭಾ ಸೆಂಟರ್ ಫಾರ್ ಸೈನ್ಸ್, ನಿರಂತರ್, ಅರವಿಂದ್ ಕುಮಾರ್ ಪಬ್ಲಿಶರ್ಸ್, ಸಮಾವೇಶ್, ಜೋಡೋ ಗ್ಯಾನ್, ನವನಿರ್ಮಿತಿ, ಮತ್ತು ಮೊಂಟೆಸ್ಸರಿ ಚೈಲ್ಡ್ ಎಜುಕೆಶನ್ -ಈ ಎಲ್ಲ ಸಂಸ್ಥೆಗಳು ಅದರಲ್ಲಿ ಪಾಲ್ಗೊಂಡಿದ್ದವು. ಈ ವಿಸ್ತರಣೆಯು ನಮಗೆ ಒಳ್ಳೆಯ ಮತ್ತು ಕೆಟ್ಟ ಎರಡೂ ಅನುಭವಗಳನ್ನು ನೀಡಿತು. ಪಿಟಾರಾದಂತಹ ವಿಭಾಗವೊಂದನ್ನು ಉಳಿಸಿಕೊಂಡು ಹೋಗುವುದೇ ಎಲ್ಲಕ್ಕಿಂತ ದೊಡ್ಡ ಸವಾಲಾಗಿತ್ತು. (ಕಡಮೆ ಬೆಲೆಯಿಂದಾಗಿ ಮತ್ತು ಬೇಡಿಕೆಗಳಿಂದಾಗಿ) ಎಲ್ಲೆಲ್ಲಿ ಉಳಿದುಕೊಂಡಿತೋ ಅದಕ್ಕೆ ಸಹಾಯ ಮಾಡಿದ ಸಂಸ್ಥೆಗಳು ಪಿಟಾರಾಕ್ಕೆ ಸಬ್ಸಿಡಿ ನೀಡಲು ಮುಂದೆ ಬಂದವು. ಟಾಟಾ ಟ್ರಸ್ಟ್ ಕೂಡಾ ಈ ಕನಸನ್ನು ನನಸಾಗಿಸಲು ನಮಗೆ ಆರಂಭದಲ್ಲಿ ಹಣಕಾಸಿನ ನೆರವನ್ನು ನೀಡಿತ್ತು. ಮುಂದಿನ 10 ವರ್ಷಗಳಲ್ಲಿ ಸುಮಾರು 22 ನಗರಗಳಲ್ಲಿ ನಮ್ಮ ಪಿಟಾರಾ ಆರಂಭವಾಯಿತು. 50 ಕ್ಕಿಂತ ಹೆಚ್ಚು ನಗರಗಳಲ್ಲಿ ಪಿಟಾರಾದಿಂದ ಪುಸ್ತಕಗಳನ್ನು ಒದಗಿಸುವ ಮೂಲಕ ನಾವು ಓದುವ ಸಂಸ್ಕೃತಿಯನ್ನು ಸೃಷ್ಟಿಸಲು ಸಮರ್ಥರಾದೆವು ಎಂದುಕೊಂಡೆವು. ಆದರೆ ಪುಸ್ತಕಗಳು ಬಿಕರಿಯಾಗುತ್ತಿರಲಿಲ್ಲ, ನಾವು ಆರ್ಥಿಕವಾಗಿ ತೊಂದರೆಗೊಳಗಾದೆವು. ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಒದಗಿಸುವುದು ನಮ್ಮ ಉದ್ದೇಶವಾಗಿದ್ದರೂ ಪಿಟಾರಾ ಮಾದರಿಯು ನಷ್ಟವನ್ನು ಅನುಭವಿಸುವ ಮಾದರಿಯಾಗಿ ಪರಿಣಮಿಸಿತು.

ಸಹಯೋಗಿತ್ವದೊಂದಿಗೆ ಪಿಟಾರಾವನ್ನು ನಡೆಸಲು ನಾವು ಬಹಳವೇನೂ ಯಶಸ್ವಿಯಾಗಲಿಲ್ಲ. ಆದರೆ, ಅದರ ಮೂಲಕವೇ ನಾವು ಮಕ್ಕಳಿಗೆ ಸಂಬಂಧಪಟ್ಟ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಎನ್‌ಜಿಓಗಳಿಗೆ ಪುಸ್ತಕಗಳನ್ನು ವಿತರಿಸಿದೆವು ಹಾಗೂ  ಪುಸ್ತಕ ಮೇಳಗಳಲ್ಲಿ, ವಿವಿಧ ಸರಕಾರಿ ಯೋಜನೆಗಳಲ್ಲಿ ಮತ್ತು ಪಾಲಕರ ಮೀಟಿಂಗ್‌ಗಳಲ್ಲಿ ಪುಸ್ತಕಗಳನ್ನು ಪ್ರಚಾರ ಮಾಡಿದೆವು. ಶಿಕ್ಷಣ ಕ್ಷೇತ್ರದಲ್ಲಿ ಏಕಲವ್ಯಕ್ಕಿದ್ದ ವಿಸ್ತೃತ ಅನುಭವದಿಂದಾಗಿ ನಾವು ಕಡಮೆ ಬೆಲೆಯಲ್ಲಿ ಓದುಗರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಮತ್ತು ಬೋಧನಾ-ಕಲಿಕಾ ಸಾಮಗ್ರಿಗಳ ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಾದದ್ದು ***ಪಿಟಾರಾ*** ದ ಒಂದು ಸಾಧನೆ ಎಂದು ಹೇಳಬಹುದು. ಅನೇಕ ಸಂಸ್ಥೆಗಳು, ಶಿಕ್ಷಣ ತಜ್ಞರು, ಪಾಲಕರು ಮತ್ತು ಶಿಕ್ಷಕರಲ್ಲಿ  ಏಕಲವ್ಯವು ಪುಸ್ತಕಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳನ್ನು ಶಿಕ್ಷಣದ ದೃಷ್ಟಿಯಿಂದ ಯೋಚಿಸಿ ಎಚ್ಚರಿಕೆಯಿಂದ ಆಯ್ದುಕೊಳ್ಳುತ್ತದೆ ಎಂಬ ವಿಶ್ವಾಸವನ್ನು ತುಂಬಲು ನಾವು ಯಶಸ್ವಿಯಾದೆವು. ಅಲ್ಲದೇ, ದೇಶದ ಎಲ್ಲೆಡೆಯಿಂದ ಆಯ್ದ ಪುಸ್ತಕಗಳನ್ನು ಒಂದು ಸೂರಿನಡಿ ಸಿಗುವಂತೆ ಮಾಡಿದ್ದು ಓದುಗರಿಗೆ ಅನುಕೂಲವಾಗಿತ್ತು. ಮುಂದೆ ಇಂಟರ್‌ನೆಟ್‌ನ ಆವಿಷ್ಕಾರವಾದ ಮೇಲೆ pitarakart.com ಎನ್ನುವ ಒಂದು ಅಂತರ್ಜಾಲ ಆವೃತ್ತಿಯನ್ನೂ ಆರಂಭಿಸಿದೆವು. ದೇಶದ ಯಾವುದೆ ಮೂಲೆಯಿಂದಾದರೂ ಪುಸ್ತಕಗಳನ್ನು ಕೊಳ್ಳುವ ಸೌಲಭ್ಯವೊಂದು ಓದುಗರಿಗೆ ಸಿಕ್ಕಂತಾಗಿದೆ.

ಈ ನಡುವೆ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳು ಮತ್ತು ಶಾಲೆಗಳಿಂದ ಈ ಪುಸ್ತಕಗಳನ್ನು ಬಳಸುವುದು ಹೇಗೆ ಎನ್ನುವುದನ್ನು ಕುರಿತು ತಿಳಿಸಿ ಎಂಬ ಬೇಡಿಕೆಗಳು ಬಂದವು. ನಾವು ಏಕಲವ್ಯ ಮತ್ತು ಇತರ ಸಂಸ್ಥೆಗಳಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಂಡೆವು. ಓದುವ ಸಂಸ್ಕೃತಿಯನ್ನು ಬೆಳೆಸಲು ನಾವು ಶಾಲೆಗಳಲ್ಲಿ ಕತೆ ಹೇಳುವ ತರಗತಿಗಳ ಮೂಲಕ ಮಕ್ಕಳು ಮತ್ತು ಶಿಕ್ಷಕರನ್ನು ತಲಪಲು ಸಾಧ್ಯವಾಯಿತು. ವಿಜ್ಞಾನ, ಸಮಾಜಶಾಸ್ತ್ರಕ್ಕೆ ಸಂಬಂಧಿಸಿ ಕ್ರಾಫ್ಟ್ ಮತ್ತು ಒರಿಗಾಮಿ ತರಗತಿಗಳು ಮತ್ತು ಭಾಷಾ ಪುಸ್ತಕಗಳನ್ನು  ವಿಸ್ತೃತವಾಗಿ ಪ್ರಚಾರ ಮಾಡಲಾಯಿತು.

**ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಪುಸ್ತಕಗಳು**

ಟಾಟಾ ಟ್ರಸ್ಟ್‌ನ  ಅಧ್ಯಯನದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ವಿತರಿಸಲೆಂದು ಮೀಸಲಾಗಿಟ್ಟ 70% ಪುಸ್ತಕಗಳಲ್ಲಿ ಕೇವಲ 20% ಮಾತ್ರವೇ ಗ್ರಾಮೀಣ ಓದುಗರನ್ನು ತಲಪುತ್ತದೆ. ಅದರಲ್ಲಿ ಎಷ್ಟು ಮಕ್ಕಳು ಪುಸ್ತಕ ತೆರೆಯುತ್ತಾರೆ ಮತ್ತು ಓದುತ್ತಾರೆ ಎನ್ನುವುದರ ಅಂಕಿಅಂಶಗಳು ಲಭ್ಯವಿಲ್ಲ. ಅನೇಕ ಖಾಸಗಿ ಶಾಲೆಗಳಲ್ಲಿ ಇರುವ ವಾಚನಾಲಯಗಳು ಮೇಲಧಿಕಾರಿಗಳು ಬಂದಾಗ ತೋರಿಸಲೆಂದು ಮಾತ್ರ ಇದ್ದಿರುತ್ತವೆ, ಶಾಲೆಗೆ ಮಾನ್ಯತೆಯನ್ನು ತಂದುಕೊಡುತ್ತದೆ ಎಂಬ ಕಾರಣಕ್ಕೆ.

ಏಕಲವ್ಯದವರು ದೇವಾಸ್ ಮತ್ತು ಉಜ್ಜೈನ್ ಜಿಲ್ಲೆಗಳ 17 ಹಳ್ಳಿಗಳಲ್ಲಿ ಮತ್ತು ಮಧ್ಯಪ್ರದೇಶದ ಬೇತುಲ್ ಜಿಲ್ಲೆಯ ಶಹಾಪುರದ ಆದಿವಾಸಿ ಸಮುದಾಯಗಳಿರುವ ಜಾಗದಲ್ಲಿ ಮಾಡಿದ ಅಧ್ಯಯನದ[4] ಪ್ರಕಾರ ನೂರು ಕುಟುಂಬಗಳಲ್ಲಿ ಪುಸ್ತಕಕ್ಕೆ ಕೊನೆಯ ಆದ್ಯತೆಯನ್ನು ನೀಡಲಾಗಿತ್ತು. ಅವುಗಳಲ್ಲಿ ಒಂದು ಕುಟಂಬದ ಒಬ್ಬ ಸದಸ್ಯ ಮಾತ್ರ ಜಿಲ್ಲಾ ಕೇಂದ್ರಕ್ಕೆ ಪುಸ್ತಕ ಖರೀದಿಸಿಲೆಂದು ಹೋಗಿದ್ದರು. ಈ ಅಧ್ಯಯನದ ನಂತರ ನಾವು ಇನ್ನೂ ಹೆಚ್ಚಿನ ಪ್ರಮಾನದಲ್ಲಿ ಗ್ರಾಮೀಣ ಭಾಗಕ್ಕೆ ಪುಸ್ತಕಗಳು ಸಿಗಲೆಂದು ಪುಸ್ತಕಗಳಿಗೆ ಇನ್ನಷ್ಟು ರಿಯಾಯಿತಿ ಕೊಡಲಾರಂಭಿಸಿದೆವು. ಹಳ್ಳಿಗಳ ವಾರದ ಮಾರುಕಟ್ಟೆಗಳಲ್ಲಿ (ವಿಲೇಜ್ ಹಾಟ್) ನಮ್ಮ ಪುಸ್ತಕದ ಸ್ಟಾಲ್‌ಗಳನ್ನು ಹಾಕತೊಡಗಿದೆವು, ಅಲ್ಲಿ ನಮಗೆ ಆಸಕ್ತಿಕರ ಅನುಭವಗಳಾದವು. ನಾವು ಅಷ್ಟು ಕಡಮೆ ದರಕ್ಕೆ ಪುಸ್ತಕಗಳನ್ನು ಮಾರುತ್ತಿದ್ದುದನ್ನು ನೋಡಿ ನಮಗೆ ಯಾರೋ ಉಚಿತವಾಗಿ ಪುಸ್ತಕಗಳನ್ನು ಕೊಟ್ಟಿರಬೇಕು ಎಂದು ಒಬ್ಬರು ಹೇಳಿದರು. ದೇವಾಸ್ ಜಿಲ್ಲೆಯ ಒಂದು ವಾರದ ಮಾರುಕಟ್ಟೆಯಲ್ಲಿ ಪುಸ್ತಕಗಳನ್ನು ಮಾರಲಾಗಲಿಲ್ಲ, ಆದರೂ ನಮಗೆ ಅಲ್ಲಿಯ ಕೆಲವು ಮಕ್ಕಳು ಮತ್ತು ಮಹಿಳೆಯರು ಪುಸ್ತಕಗಳನ್ನು ನೋಡಿ, ಮುಟ್ಟಿ, ತೆರೆದು ಪರೀಕ್ಷಿಸಿ ಸ್ವಲ್ಪ ಹೊತ್ತು ನಮ್ಮ ಸ್ಟಾಲಿನ ಎದುರು ಕಳೆದಿದ್ದನ್ನು ನೋಡಿಯೇ ಆನಂದವಾಯಿತು. ಒಂದು ಮಗುವು ನೇರಳೆ ಹಣ್ಣುಗಳನ್ನು ಮಾರಾಟ ಮಾಡುತ್ತಿತ್ತು. ನಾವು ಐದು ರೂಪಾಯಿಗೆ ಹಣ್ಣುಗಳನ್ನು ಕೊಂಡೆವು, ನಮಗೆ ಅಚ್ಚರಿ ಹುಟ್ಟಿಸುವಂತೆ ಅದೇ ಮಗು ಅನಂತರ ಆ ಐದು ರುಪಾಯಿಗಳನ್ನು ಹಿಡಿದುಕೊಂಡು ನಮ್ಮ ಸ್ಟಾಲ್ ಬಳಿ ಬಂದು ಪುಸ್ತಕವನ್ನು ಖರೀದಿಸಿತ್ತು. ಈ ಘಟನೆಯಿಂದ ನಮ್ಮ ಪ್ರಯತ್ನ ಸಾರ್ಥಕವಾಯಿತು ಎಂದು ನಮಗೆ ಅನಿಸಿತಾದರೂ ಅಲ್ಲಿ ನಮಗೆ ನಮ್ಮ ಪ್ರಯಾಣದ ಖರ್ಚನ್ನೂ ಹುಟ್ಟಿಸಲಾಗಿರಲಿಲ್ಲ. ಇಂತಹ ಪ್ರಯತ್ನಗಳನ್ನು ನಾವು ಮುಂದುವರಿಸಿದೆವಾದರೂ ಆರ್ಥಿಕ ಕಾರಣಗಳಿಗಾಗಿ ನಾವು ನಿಲ್ಲಿಸಬೇಕಾಯಿತು. ಈಗ ವಿವಿಧ ಸಂಸ್ಥೆಗಳ ಯೋಜನೆಗಳ ಮೂಲಕ ಪುಸ್ತಕಗಳು ಗ್ರಾಮೀಣ ಭಾಗಕ್ಕೆ ತಲಪುತ್ತಿವೆ ಎನ್ನುವುದನ್ನು ನೋಡಿ ನಮಗೆ ಸಂತಸವಾಗುತ್ತದೆ.

**ದೊಡ್ಡ ನಗರಗಳ ಪರಿಸ್ಥಿತಿ**

ಯಾವ ನಗರಗಳಲ್ಲಿಯೂ ಎಲ್ಲ ಮಕ್ಕಳ ಸಾಹಿತ್ಯವೂ ಒಂದೇ ಸೂರಿನಡಿ ಸಿಗುವ ಸೌಲಭ್ಯವಿರಲಿಲ್ಲ ಎನ್ನುವುದು ಸ್ವಲ್ಪ ಅನ್ವೇಷಣೆ ನಡೆಸಿದ ಅನಂತರ ನಮಗೆ ಗೊತ್ತಾಯಿತು. ದೊಡ್ಡ ನಗರಗಳಲ್ಲಿ ಅಂಗಡಿಗಳನ್ನು ಹೊಂದಿರುವ ಕೆಲವು ಪ್ರಮುಖ ಪ್ರಕಾಶಕರು ತಮ್ಮ ಪುಸ್ತಕಗಳನ್ನು ಮಾತ್ರ ಮಾರಾಟ ಮಾಡುತ್ತಾರೆ ಹಾಗೂ ಪ್ರಚಾರ ಮಾಡುತ್ತಾರೆ. ಹೀಗಾಗಿ ಅಲ್ಲಿ ಗುಣಮಟ್ಟದ ಪುಸ್ತಕಗಳ ಕೊರತೆಯೂ ಇತ್ತು ಮತ್ತು ಅವು ಮಕ್ಕಳಿಗೆ ಲಭ್ಯವಿರಲಿಲ್ಲ. ಕೆಲವು ಸಂಸ್ಥೆಗಳು ಮತ್ತು ಪ್ರಕಾಶನಗಳು ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸಲು ತೊಡಗಿದ್ದರೂ ಅವುಗಳನ್ನು ವಿತರಿಸುವುದೇ ಸಮಸ್ಯೆಯಾಗಿತ್ತು. ಹಾಗೆ ಉತ್ಪಾದನೆಯಾದ ಹೆಚ್ಚಿನ ಪುಸ್ತಕಗಳು ಗೋಡೌನ್‌ಗಳಲ್ಲಿ ಉಳಿದವು. ಕಡಮೆ ಬೆಲೆಯ ಗುಣಮಟ್ಟದ ಪುಸ್ತಕಗಳನ್ನು ಜನರಿಗೆ ತಲಪಿಸುವ ಮಾರುಕಟ್ಟೆಯ ಹಾದಿಗಳು

---

[4] *Rural outreach pilot study*, Abhishek Sudhakar.

ಇರಲಿಲ್ಲ ಮತ್ತು ಮಕ್ಕಳಿಗೆ ಸ್ವಂತಕ್ಕಾಗಿ ಕೊಳ್ಳುವ ಸ್ವಾತಂತ್ರ್ಯವಿರಲಿಲ್ಲ. ನಮಗೆ ಶಾಲೆಗಳೇ ಒಂದು ವೇದಿಕೆಯಾಗಿದ್ದವು ಮತ್ತು ನಾವು ಪಾಲಕರ ಮೀಟಿಂಗ್‌ಗಳು ಇರುವ ಸಂದರ್ಭದಲ್ಲಿ ನಮ್ಮ ಪುಸ್ತಕಗಳನ್ನು ಪ್ರಚಾರ ಮಾಡುತ್ತಿದ್ದೆವು. ಆದರೆ ಹಿಂದಿ ಮಾತನಾಡುವ ವಲಯಗಳಲ್ಲಿ ಓದುಗರು ಮತ್ತು ಪಾಲಕರಿಗೆ ಪುಸ್ತಕಗಳ ಮೇಲೆ ಖರ್ಚು ಮಾಡುವ ಆಸಕ್ತಿ ಇರಲಿಲ್ಲ, ಹಾಗೂ ಪ್ರತಿಷ್ಠಿತ ಶಾಲೆಗಳ ಪಾಲಕರಿಗೆ ಅಗ್ಗದ ದರದ ಪುಸ್ತಕಗಳು ತಮ್ಮ ಘನತೆಗೆ ಕಡಮೆಯದು ಎನಿಸುತ್ತಿತ್ತು.

ನನ್ನ ಅನುಭವದ ಪ್ರಕಾರ ಹೊಸ ತಲೆಮಾರಿನ ಪಾಲಕರಿಗೆ ಮಾರುಕಟ್ಟೆಯ ಒಲವುಗಳು ಅರ್ಥವಾಗುತ್ತಿವೆ; ಅವರು ಪುಸ್ತಕ ಖರೀದಿ ಮಾಡುತ್ತಾರೆ ಮತ್ತು ಶಾಲೆಗಳಲ್ಲೂ ಗುಣಮಟ್ಟದ ಪುಸ್ತಕಗಳನ್ನು ಇಡಬೇಕೆಂದು ಬಯಸುತ್ತಾರೆ. ಕೇಂದ್ರೀಯ ವಿದ್ಯಾಲಯದವರು ಮಕ್ಕಳಿಗೆ ಪುಸ್ತಕ ಓದಲು ಉತ್ತೇಜನ ನೀಡುತ್ತಿರುವುದು ಒಂದು ಧನಾತ್ಮಕ ಹೆಜ್ಜೆಯಾಗಿದೆ. FICCI ದ ಪ್ರಕಾಶನ ವಿಭಾಗದ ಅಭಿಪ್ರಾಯದಂತೆ ಮಾನವೀಯ ಮೌಲ್ಯಗಳ ವಿಕಸನ ಮತ್ತು ಪ್ರಚಾರಕ್ಕೆ ಪುಸ್ತಕಗಳು ಒಳ್ಳೆಯ ಮಾಧ್ಯಮಗಳಾಗಿವೆ, ಅವು ರಾಷ್ಟ್ರದ ಉನ್ನತಿಗೆ ಪ್ರೇರಕಗಳಾಗಿವೆ, ಹೊಸ ವಿಚಾರಗಳನ್ನು ಉಳಿಸಿಕೊಂಡು ಪ್ರಸರಣ ಮಾಡಲು ಸಹಾಯ ಮಾಡುತ್ತವೆ, ಶಿಕ್ಷಣ ಮತ್ತು ಮೌಲ್ಯಗಳನ್ನು ಒದಗಿಸುತ್ತವೆ. ಹೀಗೆ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಪೂರಕವಾಗುತ್ತವೆ.

ಸಮಸ್ಯೆಗಳು ಮತ್ತು ನಿರೀಕ್ಷೆಗಳ ನಡುವೆ ದೇಶದ ಪ್ರಕಾಶನ ಉದ್ಯಮದ ಪ್ರಗತಿಯ ಪ್ರಮಾಣವು ವರ್ಷಕ್ಕೆ 30% ಇದೆ. ಆದರೆ ಪ್ರಗತಿಯ ಹಾದಿಯಲ್ಲಿ ಎಷ್ಟು ಜೊಳ್ಳಿದೆ ಮತ್ತು ಎಷ್ಟು ಅಸಲಿ ಎಂಬುದು ಅಧ್ಯಯನವಾಗಬೇಕಿದೆ. ಅದರಲ್ಲಿ ಎಷ್ಟು ಪುಸ್ತಕಗಳು ಓದುಗರನ್ನು ತಲಪುತ್ತಿದೆ, ಎಷ್ಟು ಜನ ಓದುತ್ತಾರೆ ಮತ್ತು ತೋರಿಸಲಾದ ಪ್ರಗತಿಯ ಸೂಚ್ಯಂಕವು ವಾಸ್ತವವನ್ನು ಮುಚ್ಚಿಡುತ್ತಿದೆಯೆ ಎಂಬುದನ್ನೂ ನೋಡಬೇಕಿದೆ. ಅಲ್ಲದೇ ಈ ಪ್ರಗತಿಯ ಸೂಚ್ಯಂಕದಲ್ಲಿ ಪಠ್ಯಪುಸ್ತಕಗಳು, ಉತ್ತರಗಳ ಪುಸ್ತಕಗಳು, ಗೈಡ್‌ಗಳು, ಧಾರ್ಮಿಕ, ಅಧಾರ್ಮಿಕ ಮತ್ತು ರಾಜಕೀಯ ಸಾಹಿತ್ಯದ ಪಾಲು ಎಷ್ಟಿದೆ? ಈ ಮಧ್ಯೆ ಬರಹಗಾರರು ಮತ್ತು ಲೇಖಕರ ಶೋಷಣೆಯನ್ನು ಕುರಿತ ಅಂಕಿಅಂಶಗಳನ್ನು ಸಂಗ್ರಹಿಸುವುದರ ಮೇಲೆ ಯಾರಿಗಾದರೂ ಆಸಕ್ತಿ ಇದೆಯೆ? ದೇಶದ ಸಾಮಾನ್ಯ ವ್ಯಕ್ತಿಗೆ ಪುಸ್ತಕಗಳನ್ನು ಖರೀದಿಸುವುದು ಸಾಧ್ಯವೆ? ಜನಪದ ಭಾಷೆಗಳಲ್ಲಿಯೂ ಪುಸ್ತಕಗಳಿವೆಯೆ ಇಲ್ಲವೆ ಎನ್ನುವುದನ್ನು ಯಾರು ಹೇಳಬಲ್ಲರು? ಇಲ್ಲ ಅಂತಾದರೆ, ಅವುಗಳನ್ನು ಯಾರು ರೂಪಿಸುತ್ತಾರೆ?

ಸುಸ್ಥಿರ ಮತ್ತು ಸ್ವಸ್ಥ ಅಭಿವೃದ್ಧಿಯ ಪಥದಲ್ಲಿರುವ ಒಂದು ಸಮಾನ ಮತ್ತು ನ್ಯಾಯಯುತ ಸಮಾಜವನ್ನು ಕಟ್ಟುವ ಉದ್ದೇಶದಿಂದ ಸರ್ವರಿಗೂ ಅರ್ಥಪೂರ್ಣ ಶಿಕ್ಷಣವನ್ನು ಒದಗಿಸುವ ಒಂದು ಕನಸನ್ನು ನನಸಾಗಿಸಲು ನಾವು ಹೊರಟಿದ್ದೇವೆ. ನಮ್ಮ ಬಳಿ ಒಂದು ಕನಸಿದೆ, ನಮ್ಮೊಂದಿಗೆ ನೂರಾರು ಸಹ-ಕೆಲಸಗಾರರು, ಸಾವಿರಾರು ಲೇಖಕರು, ಚಿತ್ರಕಾರರು, ಮತ್ತು ಲಕ್ಷಗಟ್ಟಲೆ ಓದುಗರು ಇದ್ದಾರೆ. ಇವತ್ತಿನ ತಲೆಮಾರು ಐದು ಮಕ್ಕಳಿಗೆ ಒಂದು ಪುಸ್ತಕದಂತೆ ಇರುವ ಸ್ಥಿತಿಯನ್ನು ಬದಲಾಯಿಸುವ ದಿಶೆಯಲ್ಲಿ ಮುಂದೆ ಸಾಗುತ್ತದೆ ಎಂದು ಆಶಿಸೋಣ.

ಮನೋಜ್ ನಿಗಮ್ ಅವರು ಏಕಲವ್ಯದ ಭೋಪಾಲ್ ಶಾಖೆಯ ನಿರ್ವಾಹಕ ಅಧಿಕಾರಿಯಾಗಿದ್ದಾರೆ. ಇವರು ಕಳೆದ 25 ವರ್ಷಗಳಿಂದಲೂ ಯುವ ವೃತ್ತಿಪರ ತಂಡದೊಂದಿಗೆ ಗುಣಮಟ್ಟದ ಶೈಕ್ಷಣಿಕ ಪುಸ್ತಕಗಳನ್ನು ಪ್ರಸರಣ ಮಾಡುವ ಕೆಲಸ ಮಾಡುತ್ತಿದ್ದಾರೆ. ಇವರು ಸಾಮಾಜಿಕ, ಪರಿಸರಕ್ಕೆ ಸಂಬಂಧಿಸಿದ ಮತ್ತು ಶೈಕ್ಷಣಿಕ ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಬರೆಯುತ್ತಾರೆ. ಜನಸತ್ತಾ, ಸುಬಹ ಸವೇರೆ, ದೇಶಬಂಧು, ಚಕ್‌ಮಕ್, ಸ್ರೋತೆ ಮತ್ತು ನಯಾ ಗ್ಯಾನೋದಯ್‌ಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. manojnig@yahoo.co.in